ಆಸ್ಪತ್ರೆ, ಅದನ್ನು upgrade ಮಾಡದೇ improve ಮಾಡುವುದಕ್ಕೆ ಏನೇನು ಕ್ರಮಗಳು ಕೈಗೊಳ್ಳಬೇಕೋ ಆ ಕ್ರಮಗಳನ್ನು ಕೈಗೊಳ್ಳುತ್ತೇನೆ.

ಮುಜರಾಯಿ ಇಲಾಖೆ ದೇವಸ್ಥಾನಗಳು
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 10 (03)

ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ)

ಅ) ಮೈಸೂರು ತಾಲ್ಲೂಕಿನ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ದೇವಾಲಯಗಳ ಸಂಖ್ಯೆ ಎಷ್ಟು;

ಆ) ಈ ದೇವಾಲಯಗಳ ಅಭಿವೃದ್ಧಿ / ಜೀರ್ಣೋದ್ಧಾರಕ್ಕಾಗಿ ಕಳೆದ 3 ವರ್ಷಗಳಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು;

ಬಿಡುಗಡೆಯಾಗಿರುವ ಅನುದಾನದಲ್ಲಿ ಎಷ್ಟು ಖರ್ಚು ಮಾಡಲಾಗಿದೆ;

ಇ) ಬಿಡುಗಡೆಯಾದ ಅನುದಾನದಲ್ಲಿ ಬಹಳಷ್ಟು ಅನುದಾನವು ವಿನಿಯೋಗಿಸದೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆ3ಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಶ್ರೀ ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಪ್ರಾಧಿಕಾರವನ್ನು ಯಾವಾಗ ರಚಿಸಲಾಗುವುದು?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) 332 ಅಧಿಸೂಚಿತ ಸಂಸ್ಥೆಗಳು ಇರುತ್ತವೆ.

ಆ) ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ದೇವಾಲಯಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ವರ್ಷ	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)		ಖರ್ಚಾಗಿರುವುದು (ರೂ. ಲಕ್ಷಗಳಲ್ಲಿ)	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
2009–10	0	0	0	0
2010–11	2	15.00	0	0
2011–12	6	15.60	1	1.00
ಒಟ್ಟು	8	30.60	1	1.00

ಇ) ಹೌದು.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಮುಖಾಂತರ ಅನುದಾನ ಬಳಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ/ಸೂಚನೆಗಳನ್ನು ನೀಡಲಾಗಿರುತ್ತದೆ.

ಬಿಡುಗಡೆಯಾದ ಅನುದಾನ ಬಳಕೆ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪುನಃ ಸೂಕ್ತ ನಿರ್ದೇಶನ ನೀಡಲಾಗುತ್ತಿದೆ.

ಈ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಎಂ. ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ದಯಮಾಡಿ ಅಲ್ಲಲ್ಲಿ ಯಾರೂ ಮಾತನಾಡಬೇಡಿ. ಪ್ರಶ್ನೆ ಕೇಳುವುದು ಉತ್ತರ ಹೇಳುವುದು ಗೊತ್ತಾಗುತ್ತಿಲ್ಲ. ದಯಮಾಡಿ ಯಾರೂ ಮಾತನಾಡಬೇಡಿ.

ಶ್ರೀ ಎಂ. ಸತ್ಯನಾರಾಯಣ : ಆದರೆ, ನಮ್ಮ ಕ್ಷೇತ್ರಕ್ಕೆ ಒದಗಿಸಿರುವ 30 ಲಕ್ಷ ರೂಪಾಯಿಗಳಲ್ಲಿ ಖರ್ಚು ಮಾಡಲಿಕ್ಕೆ ಆಗಿರುವುದು 1 ಲಕ್ಷ ಮಾತ್ರ. ಮುಜರಾಯಿ ಇಲಾಖೆಯಿಂದ ಏನು ಹಣ ಖರ್ಚು ಮಾಡಬೇಕಾಗಿದೆ ಅಷ್ಟು ಹಣ ಪೂರ್ಣವಾಗಿ ಖರ್ಚು ಮಾಡುವುದಕ್ಕಾಗಿಲ್ಲ, ಇದಕ್ಕಾಗಿ ನಾನು ತುಂಬಾ ವಿಷಾಧಿಸುತ್ತೇನೆ. ಆದ್ದರಿಂದ ಅದನ್ನು ಬೇಗ ಖರ್ಚು ಮಾಡುವಂಥ ಪ್ರಯತ್ನ ಮಾಡಬೇಕು. ಇನ್ನೊಂದು ವಿಷಯ, ಚಾಮುಂಡಿ ಬೆಟ್ಟದ ಪಕ್ಕದಲ್ಲಿಯೇ ಇರುವಂಥ ಜ್ವಾಲಮುಖಿ ದೇವಸ್ಥಾನಕ್ಕೆ, ನಿರಂತರ ವಿದ್ಯುತ್ ಒದಗಿಸಲಿಕ್ಕೆ ನಾನು ಸತತವಾಗಿ ಪ್ರಯತ್ನ ಪಡುತ್ತಿದ್ದೇನೆ. ಆದರೂ ಅದು ಸಾಧ್ಯವಾಗುತ್ತಿಲ್ಲ. ಚಾಮುಂಡಿ ಬೆಟ್ಟದಷ್ಟೆ ಬಹಳ ಪ್ರಾಮುಖ್ಯತೆಯನ್ನು ಈ ದೇವಸ್ಥಾನ ಪಡೆದಿದೆ. ಜೊತೆಗೆ ಅದಕ್ಕೆ ಸಂಬಂಧಪಟ್ಟ ದೇವಸ್ಥಾನ. ಬಹಳ ದಿನವಸಗಳಿಂದ ಪ್ರಯತ್ನ ಪಡುತ್ತಿದ್ದೇನೆ ಅದು ಸಾಧ್ಯವಾಗಿಲ್ಲ. ದಯವಿಟ್ಟು ಆ ದೇವಸ್ಥಾನಕ್ಕೆ ವಿದ್ಯುದ್ದೀಕರಣ ಮಾಡಿಕೊಡಬೇಕು ಮತ್ತು ಈ ಹಣವನ್ನು ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಆದಷ್ಟು ಬೇಗನೆ ಖರ್ಚು ಮಾಡಬೇಕೆಂದು ನಾನು ಮಂತ್ರಿಗಳಲ್ಲಿ ಆಶಿಸುತ್ತೇನೆ.

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮುಜರಾಯಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಶಾಸಕರು ಹೇಳಿರುವುದ ಸರಿಯಿದೆ. ಈಗಾಗಲೇ 30 ಲಕ್ಷ ರೂಪಾಯಿಗಳ ಪೈಕಿ ತುಂಬಾ ಕಡಿಮೆ ಹಣ ಖರ್ಚಾಗಿದೆ. ತಕ್ಷಣ ಅನುದಾನ ಖರ್ಚು ಮಾಡಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ಮತ್ತೆ ಮಾನ್ಯ ಶಾಸಕರು ಹೇಳಿದ ದೇವಸ್ಥಾನಕ್ಕೆ ವಿದ್ಯುತ್ ಕೊಡುವ ವಿಚಾರದಲ್ಲಿ ಸಂಬಂಧಪಟ್ಟ ಕಡತಗಳನ್ನು ತರಿಸಿ ಪರಿಶೀಲನೆ ಮಾಡಿ ಶಾಸಕರ ಜೊತೆಗೆ ಚರ್ಚೆ ಮಾಡಿ ಸಮಸ್ಯೆಗೆ ಪರಿಹಾರ ಮಾಡುತ್ತೇವೆ.

Facilities for eye cancer patints
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 11 (28)

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)

ಅ) ಕಡುಬಡವರ ಮಕ್ಕಳು ಕಣ್ಣಿನ ಕ್ಯಾನ್ಸರ್‌ನಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ವಿದೇಶದಿಂದ ತರಬೇತಿ ಪಡೆದ ಚಿಕಿತ್ಸಕರ ಮೂಲಕ ನಾರಾಯಣ ನೇತ್ರಾಲಯವು ಉಚಿತ ಶಸ್ತ್ರ ಚಿಕಿತ್ಸೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರಾಜ್ಯದ ದೂರದ ಪ್ರದೇಶಗಳಿಂದ ಈ ಚಿಕಿತ್ಸೆಗೆ ಬರುವ ಕಡುಬಡವರಿಗೆ ಪ್ರಯಾಣದ ಖರ್ಚನ್ನು ಭರಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) ಹೌದು.

ಇ) ತೀವ್ರತರ ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಮಾತ್ರ ಸರ್ಕಾರದ ವತಿಯಿಂದ Integrated Diseases Surveillance Project ಕಾರ್ಯಕ್ರಮದಡಿಯಲ್ಲಿ ರೋಗಿಗಳಿಗೆ ಪ್ರಯಾಣದವರನ್ನು ಟಿಕೆಟ್ ಸಲ್ಲಿಸುವುದರ ಮೂಲಕ ವಾಪಸ್ಸು ಪಡೆಯಲು ಅವಕಾಶವಿರುತ್ತದೆ.